ಓ.ಎಸ್‌ಃ 8/2009

ಪಿ.ಡಬ್ಲ್ಯೂ: 04

**ದಿನಾಂಕಃ 18-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಪಾಟೀ ಸವಾಲು 2 ನೇ ಪ್ರತಿವಾದಿಗಳ ಪರ ಶ್ರೀ ಎ.ಕೆ.ಜಿ. ವಕೀಲರಿಂದಃ**

1. ವಾದಿಯು ಅಷ್ಟೊಂದು ಪರಿಚಯಸ್ಥರು ಆಗಿರುವುದಿಲ್ಲ.1 ನೇ ಪ್ರತಿವಾದಿಯು 20 ವರ್ಷಗಳ ಪರಿಚಯ ಇರುತ್ತದೆ. ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ. ಪ್ರತಿವಾದಿಯು ಆಸ್ತಿಯನ್ನು ಮಾರಾಟ ಮಾಡಲು ಇಚ್ಚಿಸಿದ್ದು, ವಾದಿಗೆ ಖರೀದಿ ಮಾಡಿಕೊಳ್ಳುತ್ತಿರಾ ಎಂದು ಕೇಳಿರುತ್ತೇವೆ. ದಿಃ15.05.2006 ರಲ್ಲಿ ಹೇಳಿರುತ್ತೇವೆ. ವ್ಯವಹಾರ ಮಾಡಲು ಪ್ರತಿವಾದಿಯು ನನಗೆ ಕರೆದಿರುತ್ತಾರೆ. 1 ನೇ ಪ್ರತಿವಾದಿಯು ಚಿನಗುಂಡ ಗ್ರಾಮದಲ್ಲಿ ವಾಸವಾಗಿದ್ದನ್ನು, ಆತನ ಮೂಲ ಊರು ಮುಳವಾಡ ಆಗಿರುತ್ತದೆ. ನಮ್ಮ ಊರಿನಿಂದ ಚಿನಗುಂಡ ಗ್ರಾಮಕ್ಕೆ 17 ಕಿ.ಮೀ. ಅಂತರ ಇರುತ್ತದೆ.

2. 1 ನೇ ಪ್ರತಿವಾದಿಯು ನನಗೆ ವ್ಯವಹಾರ ಮಾಡಲು ಕರೆಯಲು ಬಂದಿರುವುದಿಲ್ಲ, ನಾನು ಜಮಖಂಡಿಯಲ್ಲಿ ಇದ್ದಾಗ 1 ನೇ ಪ್ರತಿವಾದಿಯು ಅಲ್ಲೆ ಇದ್ದರು. ನಾನು ಜಮಖಂಡಿ ಮೀನುಗಾರಿಕೆ ಕಛೇರಿಯಲ್ಲಿ ಇದ್ದಾಗ, 1 ನೇ ಪ್ರತಿವಾದಿಯು ಸಹ ಕಛೇರಿಗೆ ಬಂದಿರುತ್ತಾರೆ, ಎಲ್ಲಿಂದ ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಬಿ.ಎ. ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಬರುತ್ತದೆ, ಸಾಕ್ಷಿ ಮುಂದುವರೆದು ಇಂಗ್ಲೀಷ್ ಅಷ್ಟೊಂದು ಬರುವುದಿಲ್ಲ ಎಂದು ನುಡಿಯುತ್ತಾರೆ. ಜಮಖಂಡಿ ಮೀನುಗಾರಿಕೆ ಕಛೇರಿಯಲ್ಲಿ ನನ್ನ ಭೇಟಿಯಾಗಲು 1 ನೇ ಪ್ರತಿವಾದಿಯು ಏಪ್ರಿಲ್ 2006 ರಲ್ಲಿ ಭೇಟಿ ಆಗಿರುತ್ತಾರೆ, ಆದರೆ ದಿನಾಂಕ ನೆನಪಿಲ್ಲ. ಸದರಿ ದಿನ ಯಾವುದೇ ಮಾತುಕತೆ ಆಗಿರುವುದಿಲ್ಲ. ಸದರಿ ದಿನ 1 ನೇ ಪ್ರತಿವಾದಿಯು ಆಸ್ತಿಯನ್ನು ಮಾರಾಟ ಮಾಡುತ್ತಿರುವ ಬಗ್ಗೆ ತಿಳಿಸಿರುತ್ತಾನೆ. ಸದರಿ ಜಮೀನು ಮುಳವಾಡ ಗ್ರಾಮದಲ್ಲಿ ಇದ್ದು, ಅದರ ಸರ್ವೆ ನಂ.63 ಕ್ಷೇತ್ರ 31 ಎಕರೆ 35 ಗುಂಟೆ ಇರುತ್ತದೆ ಎಂದು ತಿಳಿಸಿರುತ್ತಾರೆ. 1 ನೇ ಪ್ರತಿವಾದಿಯು ಆಸ್ತಿಯನ್ನು ಮಾರಾಟ ಮಾಡುತ್ತಿದ್ದಾನೆ ಎಂದು ತಿಳಿಸಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಜಮೀನು ಖರೀದಿ ವ್ಯವಹಾರ ಮಾಡಲು 1ನೇ ಪ್ರತಿವಾದಿಯು ನನಗೆ ಕರೆದಿರುತ್ತಾರೆ. ಮೀನಿನ ಮಾರುಕಟ್ಟೆಯಲ್ಲಿ ಮಾತುಕತೆ ಆಗಿರುತ್ತದೆ. ವ್ಯವಹಾರದ 2006 ರಲ್ಲಿ ಆಗಿರುತ್ತದೆ. ದಿಃ 28.08 ಆಗಿರುಬಹುದು ಎಂದು ನುಡಿಯುತ್ತಾರೆ. ದಿಃ 28.08.2006 ರಲ್ಲಿ ಮಾತುಕತೆ ಆಗಿದೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ವ್ಯವಹಾರ ಎಷ್ಟು ಹಣಕ್ಕೆ ಆಗಿರುತ್ತದೆ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿಯು 1,10,00/- ಆಗಿರುತ್ತದೆ ಎಂದು ನಮೂದಿಸಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

4. ದಾವಾ ಆಸ್ತಿ ಜಮೀನನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿಯ ಚಕಬಂದಿ ನನಗೆ ಗೊತ್ತಿಲ್ಲ. ದಿಃ 28.08.2006 ರಲ್ಲಿ ಮಾತುಕತೆ ಆಗಿದ್ದು, ಪತ್ರ ವ್ಯವಹಾರ ಆಗಿರುವುದಿಲ್ಲ. ದಿಃ30.08.2006 ರಂದು ಪತ್ರ ವ್ಯವಹಾರ ಆಗಿರುತ್ತದೆ ಎಂದು ನುಡಿಯುತ್ತಾರೆ. ದಿಃ30.08.2006 ರಂದು ಪತ್ರ ವ್ಯವಹಾರ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ.

5. ಹಿಸಾರ ಪತ್ರವನ್ನು ಜಮಖಂಡಿಯಲ್ಲಿ ತಹಶೀಲ್ದಾರ ಕಛೇರಿಯ ಎದುರುಗಡೆ ಬಾಂಡ ರೈಟರ ಬರೆದಿರುತ್ತಾರೆ ಅವರ ಹೆಸರು ನನಗೆ ಗೊತ್ತಿಲ್ಲ. ಮಧ್ಯಾಹ್ನ 1-00 ರಿಂದ 2-00 ಗಂಟೆ ಸಮಯದಲ್ಲಿ ಬಾಂಡನ್ನು 1ನೇ ಪ್ರತಿವಾದಿಯು ಟೈಪ್ ಮಾಡಿಸಿಕೊಂಡು ಬಂದಿದ್ದರು, ಸದರಿ ಬಾಂಡನ್ನು 1ನೇ ಪ್ರತಿವಾದಿಯು ಮೈಸೂರ ಬ್ಯಾಂಕಿನಿಂದ ತಂದಿದ್ದರು. ಸದರಿ ಬಾಂಡ ಮುಖ ಬೆಲೆ 200 ಆಗಿರುತ್ತದೆ. 1ನೇ ಪ್ರತಿವಾದಿಯು ಮೈಸೂರ ಬ್ಯಾಂಕಿನಿಂದ ಬಾಂಡನ್ನು ತಂದು, ಟೈಪ್ ಮಾಡಿಸಿಕೊಂಡು ಬಂದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ.

6. ಹಿಸಾರ ಹಣವನ್ನು 1ನೇ ಪ್ರತಿವಾದಿಗೆ ವಾದಿಯು ಎಷ್ಟು ಕೊಟ್ಟಿರುತ್ತಾನೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು ಹಣ ಪಡೆದುಕೊಂಡಿದ್ದಕ್ಕೆ ಯಾವುದೇ ರಶೀದಿಯನ್ನು ನೀಡಿರುದಿಲ್ಲ, ಹಿಸಾರ ಪತ್ರವನ್ನು ವಾದಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಹಣವನ್ನು ಜಮಖಂಡಿಯಲ್ಲಿ ತಹಶೀಲ್ದಾರ ಕಛೇರಿಯ ಎದುರುಗಡೆ ಬಾಂಡ ರೈಟರ ಕಛೇರಿಯಲ್ಲಿ ನೀಡಿರುತ್ತಾರೆ. 1ನೇ ಪ್ರತಿವಾದಿಗೆ ಹಣವನ್ನು ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. 1ನೇ ಪ್ರತಿವಾದಿಗೆ ಆಸ್ತಿ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ತಂದೆ ಹೆಸರು ಬಸಪ್ಪ. ಅವರ ತಂದೆಯ ಅಜ್ಜನ ಹೆಸರು ಯಮನಪ್ಪ ಆಗಿರುತ್ತದೆ, ಅವರ ಅಡ್ಡಹೆಸರು ಕಾಂಬ್ಳೆ @ ಕಲಬುರ್ಗಿ ಆಗಿರುತ್ತದೆ. 1ನೇ ಪ್ರತಿವಾದಿಗೆ ಕನ್ನಡ ಓದಲು ಬರೆಯಲು ಬರುತ್ತಿರಲ್ಲಿಲ್ಲಾ ಎಂದರೆ ಸ್ವಲ್ಪ ಬರುತ್ತಿತ್ತು ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ಇಂಗ್ಲೀಷನಲ್ಲಿ ಸಹಿ ಮಾಡುತ್ತಿದ್ದರು. ಎಸ್.ಬಿ. ಕಾಂಬ್ಳೆ ಎಂದು ಇಂಗ್ಲೀಷನಲ್ಲಿ ಬರೆಯುತ್ತಿದ್ದರು. ನಮ್ಮ ಸಮಕ್ಷಮ ದಾವಾ ಆಸ್ತಿಯ ಜಮೀನಿನ ವ್ಯವಹಾರ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು ವಾದಿಗೆ 1,10,000/- ಮಾರಾಟ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ದಾವಾ ಆಸ್ತಿಯನ್ನು ಒಂದು ಎಕರೆ ಎಷ್ಟು ಹಣಕ್ಕೆ ವ್ಯವಹಾರ ಆಗಿರುತ್ತದೆ ಎಂದರೆ ಸಾಕ್ಷಿಯು ಒಟ್ಟು ಜಮೀನಿಗೆ ವ್ಯವಹಾರ ಆಗಿರುತ್ತದೆ ಎಂದು ನುಡಿಯುತ್ತಾರೆ. 2 ರಿಂದ 4ನೇ ಪ್ರತಿವಾದಿಗಳಿಗೆ ಆಸ್ತಿಯನ್ನು ಮಾರಾಟ ಮಾಡಿದ ಬಗ್ಗೆ ವಾದಿಯು ಹೇಳಿದ ನಂತರ ನನಗೆ ಸನ್ 2011 ರಲ್ಲಿ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಮತ್ತು ವಾದಿಯು ಆತ್ಮಿಯ ಸ್ನೇಹಿತರು ಎಂದರೆ ಸರಿಯಲ್ಲ. ಸಾಕ್ಷಿಯು ದಿನಾಂಕವನ್ನು ವಾದಿಯೆ ನನಗೆ ತಿಳಿಸುತ್ತಾರೆ ಎಂದರೆ ಸರಿ. ನನ್ನ ಹೋಗು ಬರುವ ಖರ್ಚು ವಾದಿಯೆ ನೋಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು KIDB ರವರು ಸ್ವಾಧಿನಪಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೆ ವ್ಯವಹಾರ ಆಗಿಲ್ಲ, 1ನೇ ಪ್ರತಿವಾದಿಯು ಯಾವುದೇ ಆಸ್ತಿಯನ್ನು ಮಾರಾಟ

ಮಾಡಿಲ್ಲ ಎಂದರೆ ಸರಿಯಲ್ಲ. 2 ರಿಂದ 4ನೇ ಪ್ರತಿವಾದಿಯರು ಖರೀದಿ ಮಾಡಿದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ ಬಗ್ಗೆ ವಾದಿಯು ತಿಳಿಸಿರುತ್ತಾರೆ. 2 ರಿಂದ 4ನೇ ಪ್ರತಿವಾದಿಯರು 1ನೇ ಪ್ರತಿವಾದಿಯಿಂದ ಖರೀದಿ ಮಾಡಿದ ಬಗ್ಗೆ ದಾಖಲಾತಿಯನ್ನು ಸಾಕ್ಷಿಗೆ ತೋರಿಸಿದ್ದು, ಸದರಿ ಪತ್ರ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

9. ಸಾಕ್ಷಿಗೆ ನಿಡಿ-1 ನು ತೋರಿದ್ದು, ಅದರಲ್ಲಿ ಇರುವ 1ನೇ ಪ್ರತಿವಾದಿಯ ಪೋಟೋವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಅದನ್ನು ನಿಡಿ-1 ಎಂದು ಗುರುತಿಸಲಾಯಿತು. 1ನೇ ಪ್ರತಿವಾದಿಯು ಎಸ್.ಬಿ.ಕೆ ಅಂತಾ ಸಹಿ ಮಾಡುತ್ತಾರೆ ಎಂದರೆ ಸಾಕ್ಷಿಯು ನನ್ನ ಸಮಕ್ಷಮ ಎಸ್.ಬಿ.ಕಾಂಬ್ಲೆ ಎಂದು ಮಾಡುತ್ತಾರೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ಎಸ್.ಬಿ.ಕೆ ಅಂತಾ ಸಹಿ ಮಾಡುತ್ತಾರೆ ಎಂದರೆ ಸಾಕ್ಷಿಯು ನನ್ನ ಸಮಕ್ಷಮ ಎಸ್.ಬಿ.ಕಾಂಬ್ಲೆ ಎಂದು ಮಾಡುತ್ತಾರೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ಎಸ್.ಬಿ.ಕಾಂಬ್ಲೆ ಎಂದು ಸಹಿ ಮಾಡುತ್ತಾರೆ ಎಂದು ನಾನು ಬೇರೆ ದಾಖಲಾತಿಗಳನ್ನು ನೋಡಿರುವುದಿಲ್ಲ. ನನ್ನ ಗುರುತಿನ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಪಾಟೀ ಸವಾಲು 3 ಮತ್ತು 4 ಪ್ರತಿವಾದಿಯರು ಪಾಟೀ ಸವಾಲಿಗೆ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದುಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**